**ಕರ್ನಾಟಕ ಸರ್ಕಾರ**

**ಕರ್ನಾಟಕ ಜೀವವೈವಿಧ್ಯ ಮಂಡಳಿ**

**(ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ)**

ಸಂ. ಟಿಇಸಿ/ಸಿ08/ಕೆಬಿಬಿ/17/Vol-III/ ದಿನಾಂಕ : 26.03.2021

**ಅಧಿಸೂಚನೆ**

**ಜೀವವೈವಿಧ್ಯ ಪ್ರಶಸ್ತಿ 2020-21**

**ಅರ್ಜಿ/ನಾಮನಿರ್ದೇಶನಕ್ಕಾಗಿ ಆಹ್ವಾನ**

ಜೀವವೈವಿಧ್ಯತೆಯ ಸಂರಕ್ಷಣೆ, ಅವುಗಳ ಘಟಕಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳು ಹಾಗೂ ಪಾರಂಪರಿಕ ಜ್ಞಾನದ ಬಳಕೆಯಿಂದ ದೊರೆಯುವ ಲಾಭಗಳ ನಿಷ್ಪಕ್ಷಪಾತ ಮತ್ತು ನ್ಯಾಯ ಸಮ್ಮತ ಹಂಚಿಕೆಯಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ವ್ಯಕ್ತಿ/ಸಂಸ್ಥೆಗ್ಳನ್ನು ಗುರುತಿಸಿ, ಸನ್ಮಾನಿಸುವ ಸಲುವಾಗಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು 2020-21 ನೇ ಸಾಲಿಗಾಗಿ ಈ ಕೆಳಕಂಡ ವಿಭಾಗಗಳಲ್ಲಿ ಜೀವವೈವಿಧ್ಯ ಪ್ರಶಸ್ತಿಯನ್ನು ಪ್ರತಿಷ್ಠಾಪಿಸಿದೆ.

**ವಿಭಾಗಗಳು :**

1. ಜೀವವೈವಿಧ್ಯತೆ – ಸಾಮಾನ್ಯ ವಿಭಾಗ
2. ಕೃಷಿ ಜೀವವೈವಿಧ್ಯತೆ
3. ಜೀವವೈವಿಧ್ಯತೆ ಮಹಿಳಾ ಪ್ರಶಸ್ತಿ
4. ಅತ್ಯುತ್ತಮ ಜೀವವೈವಿಧ್ಯ ನಿರ್ವಹಣಾ ಸಮಿತಿ
5. ಅತ್ಯುತ್ತಮ ಜೀವವೈವಿಧ್ಯ ಸಾಕ್ಷ್ಯ ಚಿತ್ರ

ಸದರಿ ಪ್ರಶಸ್ತಿಯು ಪ್ರತಿ ವಿಭಾಗದಲ್ಲಿಯೂ ರೂ.25,000/- ಪ್ರಶಸ್ತಿ ಮೊತ್ತ ಮತ್ತು ಪ್ರಶಂಸಾ ಪತ್ರಗಳನ್ನು ಒಳಗೊಂಡಿರುತ್ತದೆ.

**ಮಾರ್ಗಸೂಚಿ ಮತ್ತು ಆಯ್ಕೆ ಮಾನದಂಡಗಳು :-**

1. ಜೀವವೈವಿಧ್ಯತೆಯ ಸಂರಕ್ಷಣೆ, ಅವುಗಳ ಘಟಕಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳು ಹಾಗೂ ಪಾರಂಪಾರಿಕ ಜ್ಞಾನದ ಬಳಕೆಯಿಂದ ದೊರೆಯುವ ಲಾಭಗಳ ನಿಷ್ಪಕ್ಷಪಾತ ಮತ್ತು ನ್ಯಾಯ ಸಮ್ಮತ ಹಂಚಿಕೆಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ/ಸಂಸ್ಥೆಗಳಿಗೆ (ಕರ್ನಾಟಕದಲ್ಲಿ ವಾಸವಾಗಿರುವವರು) ಈ ಪ್ರಶಸ್ತಿಯು ಮುಕ್ತವಾಗಿದೆ.
2. ಪ್ರಶಸ್ತಿಗೆ ಆಯ್ಕೆ ಮಾಡುವಾಗ ಮೇಲೆ ತಿಳಿಸಿರುವ ಯಾವುದಾದರೂ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ/ಯೋಜನೆ, ಕಾರ್ಯಕ್ರಮಗಳ ಮೂಲಕ ನೀಡಿರುವ ಕೊಡುಗೆಯ ಮೌಲ್ಯ ನಿರ್ಣಯ ಮಾಡಿ ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡಲಾಗುವುದು.
3. ಮೇಲ್ಕಾಣಿಸಿದ ಸಾಮಾನ್ಯ ಮತ್ತು ಕೃಷಿ ಜೀವವೈವಿಧ್ಯತೆಯ ವಿಭಾಗದಲ್ಲಿ ವೈಯಕ್ತಿಕ/ಸರ್ಕಾರೇತರ ಸಂಸ್ಥೆ/ಶಿಕ್ಷಣ ಸಂಸ್ಥೆ/ಸರ್ಕಾರಿ ಇಲಾಖೆ, ಮಂಡಳಿ, ಕಾರ್ಪೋರೇಷನ್‌ಗಳಿಂದ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದು.
4. ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸುವವರು ಕಳೆದ ಮೂರು ವರ್ಷಗಳಲ್ಲಿ ತಾವು ಮಾಡಿರುವ ಕಾರ್ಯ ಸಾಧನೆಯನ್ನು ಮಾತ್ರ ಉಲೇಖಿಸಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.
5. ಸರ್ಕಾರೇತರ ಸಂಸ್ಥೆಯಾಗಿದ್ದಲ್ಲಿ ಪ್ರಶಸ್ತಿ ನೀಡುವ ವರ್ಷಕ್ಕೆ ನೊಂದಾಯಿತವಾಗಿ ಕನಿಷ್ಟ ಮೂರು ವರ್ಷಗಳಾಗಿರಬೇಕು.
6. ಅಧಿಕಾರ ಸಾಮರ್ಥ್ಯದಲ್ಲಿ ಸರ್ಕಾರಿ ಅನುದಾನದೊಂದಿಗೆ ನಿರ್ವಹಿಸಲಾದ ಕಾರ್ಯಗಳು/ ಯೋಜನೆಗಳು/ ಕಾರ್ಯಕ್ರಮಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ.
7. ಸಾಮಾನ್ಯ ವಿಭಾಗವು ಜೀವವೈವಿಧ್ಯತೆಯ ಸಂರಕ್ಷಣೆ ಮತ್ತು ಅದರ ಘಟಕಗಳ ಸುಸ್ಥಿರ ಬಳಕೆ ಅಂದರೆ ಜೈವಿಕ ವ್ಯವಸ್ಥೆ, ನೈಸರ್ಗಿಕ ಸಸ್ಯರಾಶಿ, ವನ್ಯಜೀವಿ, ನೈಸರ್ಗಿಕ ಸಂಪನ್ಮೂಲಗಳ ವ್ಯವಸ್ಥಾಪನೆ ಇತ್ಯಾದಿಗಳನ್ನು ಒಳಗೊಂಡಿದ್ದು, ಈ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ವ್ಯಕ್ತಿ/ಸಂಸ್ಥೆಗಳು ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

8. ಕೃಷಿ ಜೀವವೈವಿಧ್ಯತೆ ವಿಭಾಗದಲ್ಲಿ ಕೃಷಿ ಕ್ಷೇತ್ರದಲ್ಲಿ ಜೀವವೈವಿಧ್ಯತೆಯ ಸಂರಕ್ಷಣೆ/ಸುಸ್ಥಿರ ಬಳಕೆಯಲ್ಲಿ ವಿಶಿಷ್ಟ ಸಾಧನೆಯನ್ನು ಮಾಡಿರುವ ವ್ಯಕ್ತಿ/ಸಂಸ್ಥೆಗಳು ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
9. ಜೀವವೈವಿಧ್ಯತೆ ಮಹಿಳಾ ಪ್ರಶಸ್ತಿ ವಿಭಾದಲ್ಲಿ ವೈಯಕ್ತಿಕವಾಗಿ ಅಥವಾ ಸ್ತ್ರೀ ಶಕ್ತಿ ಸಂಘದ ಮೂಲಕವಾಗಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
10. ಅತ್ಯುತ್ತಮ ಜೀವವೈವಿಧ್ಯ ನಿರ್ವಹಣಾ ಸಮಿತಿ ಪ್ರಶಸ್ತಿ ವಿಭಾಗದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಸ್ಥಾಪಿತವಾಗಿರುವ ಅಂದರೆ, ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ಕಾರ್ಪೋರೇಷನ್‌ಗಳ ಮಟ್ಟದಲ್ಲಿ ಜೀವವೈವಿಧ್ಯ ಮಂಡಳಿಯಿಂದ ಸ್ಥಾಪಿತವಾಗಿರುವ ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ತಾವು ಜೀವವೈವಿಧ್ಯ ಸಂರಕ್ಷಣೆ/ನಿರ್ವಹಣೆಯಲ್ಲಿ ಸಲ್ಲಿಸಿರುವ ಸೇವೆ/ಕೊಡುಗೆ ಉಲ್ಲೇಖಿಸಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
11. ಅತ್ಯುತ್ತಮ ಜೀವವೈವಿಧ್ಯ ಸಾಕ್ಷ್ಯ ಚಿತ್ರ ಪ್ರಶಸ್ತಿ ವಿಭಾಗದಲ್ಲಿ ಜೀವವೈವಿಧ್ಯತೆ ಸಂರಕ್ಷಣೆ, ಸುಸ್ಥಿರ ಬಳಕೆಯ ಬಗ್ಗೆ ಜನ ಸಾಮಾನ್ಯರಲ್ಲಿ/ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವಂತಹ ಸಾಕ್ಷ್ಯ ಚಿತ್ರಗಳನ್ನು ಪರಿಗಣಿಸಲಾಗುವುದು.
12. ಒಂದು ವಿಭಾಗದಲ್ಲಿ ಈ ಹಿಂದೆ ಜೀವವೈವಿಧ್ಯ ಪ್ರಶಸ್ತಿ ಪುರಸ್ಕೃತರಾದ ವ್ಯಕ್ತಿ/ಸಂಸ್ಥೆಗಳನ್ನು ಅದೇ ವಿಭಾಗದಲ್ಲಿ ಪರಿಗಣಿಸಲಾಗುವುದಿಲ್ಲ.
13. ಸರ್ಕಾರದಿಂದ/ಮಂಡಳಿಯಿಂದ ರಚನೆಗೊಂಡಿರುವ ಪ್ರಶಸ್ತಿ ಆಯ್ಕೆ ಸಮಿತಿಯಿಂದ ಅರ್ಜಿಗಳ ಪರಿಶೀಲನೆ ನಂತರ ಅರ್ಹರನ್ನು ಆಯ್ಕೆ ಮಾಡಲಾಗುವುದು.
14. ಅರ್ಜಿದಾರರನ್ನು ಪ್ರಶಸ್ತಿ ಸಮಿತಿಯ ಮುಂದೆ ವೈಯಕ್ತಿಕವಾಗಿ ಹಾಜರಾಗಲು ಆಹ್ವಾನಿಸಲಾಗುವುದಿಲ್ಲ. ಅದ್ದರಿಂದ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಅರ್ಜಿಯೊಂದಿಗಿರುವ ಮಾಹಿತಿಗಳೊಂದಿಗೆ ಸಮರ್ಪಕ ರೀತಿಯಲ್ಲಿ ಲಗತ್ತಿಸಿರಬೇಕು. ಅಪೂರ್ಣವಾದ ಹಾಗೂ ಕಾರ್ಯನಿರ್ವಹಿಸಿರುವುದರ ಬಗ್ಗೆ ಆಧಾರವಾಗಿರುವ ದಾಖಲೆ/ಸಾಕ್ಷ್ಯಧಾರ/ರುಜುವಾತುಗಳು ಇಲ್ಲದೇ ಸಲ್ಲಿಸಲಾದ ಅರ್ಜಿಗಳನ್ನು ಪ್ರಶಸ್ತಿ ಆಯ್ಕೆ ಸಮಿತಿಯ ಮುಂದೆ ಮಂಡಿಸಲಾಗುವುದಿಲ್ಲ.
15. ಪ್ರಶಸ್ತಿ ಆಯ್ಕೆ ಸಮಿತಿಯು ಅಗತ್ಯವಿದ್ದಲ್ಲಿ ಅರ್ಜಿದಾರರು/ನಾಮನಿರ್ದೇಶನ ಮಾಡುವವರು ಪ್ರತಿಪಾದಿಸುವ ಕಾರ್ಯಗಳ ಕುರಿತಾಗಿ ಕ್ಷೇತ್ರ ಸಮೀಕ್ಷೆ ನಡೆಸುವ ಅಧಿಕಾರವನ್ನು ಹೊಂದಿರುತ್ತದೆ.
16. ಆಧಾರ ರಹಿತ ಪ್ರತಿಪಾದನೆ ಮಾಡುವ ಹಾಗೂ ಪ್ರಭಾವ ಬೀರುವ ಅರ್ಜಿದಾರರನ್ನು ಈ ಪ್ರಶಸ್ತಿಗೆ ಮತ್ತು ಮುಂದಿನ ಯಾವುದೇ ಪ್ರಶಸ್ತಿಗೆ ಅನರ್ಹಗೊಳಿಸಲಾಗುವುದು.ಅ

<u>ಅರ್ಜಿಗಳನ್ನು ಸಲ್ಲಿಸುವುದು :</u>

ಸದಸ್ಯ ಕಾರ್ಯದರ್ಶಿಗಳು<br>
ಕರ್ನಾಟಕ ಜೀವವೈವಿಧ್ಯ ಮಂಡಳಿ<br>
ಕೆಳ ಮಹಡಿ, ವನವಿಕಾಸ,<br>
18ನೇ ಅಡ್ಡ ರಸ್ತೆ, ಮಲ್ಲೇಶ್ವರಂ,<br>
ಬೆಂಗಳೂರು-03 ಇವರಿಗೆ ಕಳುಹಿಸಬೇಕಾಗಿರುತ್ತದೆ.

<u>ಕೊನೆಯ ದಿನಾಂಕ :</u>

**ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ : 03.05.2020ರಂದು ಸಾಯಂಕಾಲ 5.00 ಗಂಟೆಯೊಳಗಾಗಿ ಮಂಡಳಿಗೆ ಅಂಚೆ/ಖುದ್ದಾಗಿ ಸಲ್ಲಿಸಬಹುದು.**

**ಹೆಚ್ಚಿನ ಮಾಹಿತಿ/ವಿವರಗಳಿಗಾಗಿ ದಯವಿಟ್ಟು ಮಂಡಳಿಯ ವೆಬ್‌ಸೈಟ್ <u>https://kbb.karnataka.gov.in/</u> ಗೆ ಸಂಪರ್ಕಿಸಿ.**

ಸದಸ್ಯ ಕಾರ್ಯದರ್ಶಿಗಳು<br>
ಕರ್ನಾಟಕ ಜೀವವೈವಿಧ್ಯ ಮಂಡಳಿ

## 2020-21 ನೇ ಸಾಲಿನ ಜೀವವೈವಿಧ್ಯತೆ ಪ್ರಶಸ್ತಿಗಾಗಿ ಅರ್ಜಿ ನಮೂನೆ

| | | | |
|---|---|---|---|
| 1 | ವ್ಯಕ್ತಿ/ಸಂಸ್ಥೆಯ ಹೆಸರು | : | |
| 2 | ಪತ್ರ ವ್ಯವಹಾರದ ಪೂರ್ಣ ವಿಳಾಸ | : | |
| 3 | ಜನ್ಮ ದಿನಾಂಕ (ವ್ಯಕ್ತಿಗಳಾಗಿದ್ದಲ್ಲಿ) | : | |
| 4 | ಸ್ಥಾಪನೆಗೊಂಡ ದಿನಾಂಕ(ಸಂಸ್ಥೆಗಳಾಗಿದ್ದಲ್ಲಿ) | : | |
| 5 | ಅರ್ಜಿ ಸಲ್ಲಿಸುತ್ತಿರುವ ಪ್ರಶಸ್ತಿ ವಿಭಾಗ | : | |
| 6 | ವೈಯಕ್ತಿಕ ವಿವರ | : | |
| | a. ವಿದ್ಯಾರ್ಹತೆ | : | |
| | b. ವೃತ್ತಿ(ಸರ್ಕಾರಿ ಕೆಲಸ/ಸ್ವಂತ ಉದ್ಯೋಗ) | : | |
| | c. ವಾರ್ಷಿಕ ಆದಾಯ | : | |
| | d. ದೂರವಾಣಿ (ಸ್ಥಿರ/ಮೊಬೈಲ್) | : | |
| | e. ಇ-ಮೇಲ್ | : | |
| 7 | ಸದರಿ ಕಾರ್ಯಕ್ಷೇತ್ರದಲ್ಲಿನ ಸೇವಾವಧಿ/ಸದರಿ ಕಾರ್ಯಕ್ಷೇತ್ರದಲ್ಲಿ ಎಂದಿನಿಂದ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾರೆ. | : | |
| 8 | ಜೀವವೈವಿಧ್ಯತೆಯ ಸಂರಕ್ಷಣೆ/ಸುಸ್ಥಿರ ಬಳಕೆಯಲ್ಲಿನ ಆರಂಭ ಶೀಲತೆ/ಕಾರ್ಯಕ್ರಮಗಳ ಬಗ್ಗೆ ವರ್ಷವಾರು ವಿವರ(ಆಧಾರ ದಾಖಲೆಗಳ ಸಹಿತ) | : | |
| | 1. ಸಮುದಾಯ ಮಟ್ಟದಲ್ಲಿನ ಕೊಡುಗೆಯ ವಿವರ | : | |
| | 2. ವೈಯಕ್ತಿಕ ಸಾಧನೆಗಳ ವಿವರ | : | |
| | 3. ಜೀವವೈವಿಧ್ಯತೆಗೆ ಸಂಬಂಧಪಟ್ಟ ತಿಳುವಳಿಕಾ ಲೇಖನಗಳು/ಅಂಕಣಗಳು/ಸಂಶೋಧನಾ ಲೇಖನಗಳು | : | |
| 9 | ಪ್ರಶಸ್ತಿಗಾಗಿ ಉಲ್ಲೇಖಿಸಿರುವ ಆರಂಭಶೀಲತೆ/ ಕಾರ್ಯಕ್ರಮಕ್ಕಾಗಿ ವೆಚ್ಚವಾಗಿರುವ ಹಣ ಮತ್ತು ಅದರ ಮೂಲ | : | |
| 10 | ಇತರೆ ಪ್ರಶಸ್ತಿ/ಸನ್ಮಾನಗಳು ದೊರತಿದ್ದಲ್ಲಿ ಅವುಗಳ ವಿವರ | : | |
| 11 | ಪ್ರತಿಪಾದನೆಗಾಗಿ ಲಗತ್ತಿಸಿರುವ ದಾಖಲಾತಿಗಳು | : | |

ಅರ್ಜಿದಾರರ ಸಹಿ

ಸ್ಥಳ :

ದಿನಾಂಕ :